# ಎಲ್ಲೆಗಳ ಮೀರಿದ ಎಲ್ಲೋರಾ



**ಎಲ್ಲೋರಾದ ಗುಹಾಂತರ ದೇವಾಲಯಗಳು ಕಲ್ಲಿನಲ್ಲಿ ಅರಳಿದ ಪವಾಡದಂತೆ ಕಾಣಿಸುತ್ತವೆ. ಅಪ್ರತಿಮ ಸೌಂದರ್ಯ, ಕುಸುರಿತನ ಹಾಗೂ ಈ ಕಾಲಕ್ಕೂ ಅಪರೂಪ ಎನ್ನಬಹುದಾದ ತಾಂತ್ರಿಕ ಸಾಹಸಗಳ ಸಮೀಕರಣದ ರೂಪದಲ್ಲಿ ನೋಡಬಹುದಾದ ಎಲ್ಲೋರಾದ ಕಲಾಕೃತಿಗಳು, ಧಾರ್ಮಿಕ ಸಾಮರಸ್ಯದ ರಾಯಭಾರಿಗಳಂತೆಯೂ ಕಾಣಿಸುತ್ತವೆ.**

**■ ಸುಚಿತ್ರಾ ಹೆಗಡೆ**

ಇಂಗ್ಲೆಂಡಿನ ಪ್ರವಾಸದಲ್ಲಿದ್ದಾಗ, ಯುನೆಸ್ಕೊ ಪಟ್ಟಿಯಲ್ಲಿರುವ ಸ್ಟೋನ್ ಹೆಂಜ್ ಎನ್ನುವ ಪಾರಂಪರಿಕ ತಾಣವನ್ನು ನೋಡಲು ಹೋಗಿದ್ದೆ. ತೀರಾ ವಿಶೇಷವೇನೂ ಕಾಣಿಸದೆ ಪಿಚ್ಚೆನಿಸಿತ್ತು. ಕೆಲವು ಚಪ್ಪಡಿಕಲ್ಲುಗಳನ್ನು ನೇರವಾಗಿ ನಿಲ್ಲಿಸಿದಂತೆ ಕಾಣುತ್ತಿದ್ದ ಜಾಗವನ್ನು ನೋಡಲು ಲಂಡನ್ನಿಂದ ಇಷ್ಟು ದೂರ ಬಂದೆವಲ್ಲ ಎಂದುಕೊಂಡರೂ ಅದಮ್ಯ ಆಸಕ್ತಿ ಮತ್ತು ಬೆರಗಿನಿಂದ ನೋಡುತ್ತಿದ್ದ ಪ್ರವಾಸಿಗರ ಮುಂದೆ ಮಂಗನಾಗಬಾರದೆಂದು ನಾನೂ ಗಾಂಭೀರ್ಯದಿಂದ ಆ ಕಲ್ಲುಗಳನ್ನು ನೋಡಿದ್ದೆ. ಈ ಕಲ್ಲುಗಳನ್ನು ಹೇಗೆ ತಂದಿರಬಹುದು? ಹೇಗೆ ನಿಲ್ಲಿಸಿರಬಹುದು? ಎಂಬೆಲ್ಲ ಪ್ರವಾಸಿಗರ ಉದ್ಗಾರಗಳ ನಡುವೆಯೇ ಬೇಡಬೇಡವೆಂದರೂ ನನ್ನ ಮನಸ್ಸಿನಲ್ಲಿ ಎಲ್ಲೋರಾದ ಚಿತ್ರಗಳು ಮೂಡಿದ್ದವು. ಸಂಪೂರ್ಣವಾಗಿ ಕಲ್ಲಿನಲ್ಲಿ ಕಡೆದ ಅದ್ಭುತವಾದ ಕೈಲಾಸನಾಥ ದೇವಾಲಯದ ಜೊತೆಗೆ ಇಂಗ್ಲೆಂಡ್‌ನ ಕಲ್ಲಿನ ರಚನೆಯನ್ನು ಮನಸ್ಸು ಹೋಲಿಸಿತ್ತು. ಅಂದಹಾಗೆ, ಸ್ಟೋನ್ ಹೆಂಜ್‌ನ ಐತಿಹಾಸಿಕ ಮಹತ್ವವನ್ನು ಅಲ್ಲಗಳೆಯುವ ಉದ್ದೇಶ ನನ್ನದಲ್ಲ, ಆ ಧಾರ್ಷ್ಟ್ಯವೂ ನನಗಿಲ್ಲ.

ಎಲ್ಲೋರಾ ಗುಹೆಗಳ ಕುರಿತು ನೀವೆಷ್ಟೇ ಓದಿದ್ದರೂ ತಿಳಿದುಕೊಂಡಿದ್ದರೂ, ಅವುಗಳ ಎದುರು ನಿಂತಾಗ ಬೆಕ್ಕಸ ಬೆರಗಾಗಿ ನಿಲ್ಲುವುದು ತಪ್ಪದು. ಸಾವಿರಾರು ವರ್ಷಗಳ ಹಿಂದೆಯೇ ಘಟಿಸಿದ ಕಲಾಕೃತಿಗಳು ಪವಾಡಸದೃಶವಾಗಿ ಕಾಣುತ್ತವೆ. ಒಂದೇ ಜಾಗದಲ್ಲಿ, ಸಾಲು ಸಾಲಾಗಿ, ನಮ್ಮಲ್ಲೇ ಹುಟ್ಟಿದ ಹಿಂದೂ, ಬೌದ್ಧ ಮತ್ತು ಜೈನ ಧರ್ಮಗಳು ತಮ್ಮ ದೇವಾಲಯ, ವಿಹಾರ ಮತ್ತು ಬಸದಿಗಳನ್ನು ನಿರ್ಮಿಸಿರುವುದು ಪ್ರಾಚೀನ ಭಾರತದ ಸರ್ವ ಧರ್ಮ ಸಹಿಷ್ಣುತೆಗೊಂದು ಅಸದೃಶ ಉದಾಹರಣೆಯಾಗಿದೆ. ಎಲ್ಲೋರಾದ ಗುಹೆಗಳು ಜಾತಿ, ಮತಗಳ ಕಟ್ಟುಪಾಡುಗಳ ಎಲ್ಲೆಯನ್ನು ಮೀರಿ ನಿಂತ ಹಾಗೆ ಭಾಸವಾಗುತ್ತದೆ.

ಈ ಗುಹೆಗಳನ್ನು ನಿರ್ಮಾಣ ಮಾಡಿದ್ದಾದರೂ ಹೇಗೆ ಮತ್ತು ಯಾವಾಗ? ನಮ್ಮ ಪುರಾತನ ಜಗತ್ತು ನೆಲದಿಂದ ಒಂದೊಂದಾಗಿ ಕಲ್ಲುಗಳನ್ನು ಕೆತ್ತಿ ಜೋಡಿಸಿ ಸ್ಮಾರಕಗಳು ಮತ್ತು ದೇವಾಲಯಗಳನ್ನು ನಿರ್ಮಿಸುತ್ತಿದ್ದ ದಿನಗಳಲ್ಲಿ, ಎಲ್ಲೋರಾ ತೀರಾ ಊಹಿಸಲಸಾಧ್ಯವಾದ ವಿಧಾನವನ್ನು ಆಯ್ದುಕೊಂಡಿತು. ಸುಮಾರು ಎರಡು ಕಿಲೋಮೀಟರ್ ಉದ್ದದ ಬಸಾಲ್ಟ್ ಬಂಡೆಕಲ್ಲಿನ ಬೆಟ್ಟಗಳ ಅಂಚಿನಲ್ಲಿ ತುಟ್ಟತುದಿಯಿಂದ ಕೆಳಮುಖವಾಗಿ ಕೊರೆಯುತ್ತಾ ಸಾವಿರಾರು ಟನ್ನು ಬಂಡೆಗಲ್ಲನ್ನು ತೆಗೆದು, ಎರಡು ಮೂರು ಅಂತಸ್ತುಗಳ ಪರಿಪೂರ್ಣವಾದ ಗುಹಾಂತರ ದೇವಾಲಯಗಳನ್ನು ಅಂದಿನ ತಲೆಮಾರು ನಿರ್ಮಿಸಿಬಿಟ್ಟಿದೆ. ಇದೆಲ್ಲ ನಡೆದದ್ದು ಆರರಿಂದ ಒಂಬತ್ತನೇ ಶತಮಾನಗಳ ಮಧ್ಯೆ. ಈ ಗುಹೆಗಳು ಹಂತ ಹಂತವಾಗಿ ನಿರ್ಮಾಣಗೊಂಡಿದ್ದರಿಂದ ನಿಖರವಾದ ಕಾಲಗಣನೆಯಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ.

ಎಲ್ಲೋರಾಕ್ಕೆ ತುಸು ದೂರದಲ್ಲಿರುವ ಅಜಂತಾದಲ್ಲಿ ಕಲ್ಲಿನ ಗುಹೆಯೊಳಗೇ ಸ್ತಂಭಗಳು, ಉದ್ದನೆಯ ಹಜಾರಗಳನ್ನು ಒಳಗೊಂಡ ಬುದ್ಧ ವಿಹಾರಗಳು ಶತಮಾನದಷ್ಟು ಹಿಂದೆಯೇ ನಿರ್ಮಾಣಗೊಂಡಿದ್ದವು. ಎಲ್ಲೋರಾ ಇನ್ನೊಂದು ಹೆಜ್ಜೆ ಮುಂದಿಟ್ಟು, ಬಂಡೆಯ ಬೆಟ್ಟವನ್ನು ಕಡಿದು, ನಾಲ್ಕೂ ದಿಕ್ಕುಗಳಲ್ಲಿ ತೆರವಾಗಿರುವ, ಸ್ವತಂತ್ರ ದೇವಾಲಯಗಳನ್ನೇ ಕಟೆದು ನಿಲ್ಲಿಸಿತು.